

ವಾಗ್ಗೇಯಕಾರರು ಸಂಗೀತ ನೃತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆಯನ್ನೇ ನೀಡಿದರು. ಅನ್ನಮಾಚಾರ್ಯರು, ಕ್ಷೇತ್ರಯ್ಯ, ನಾರಾಯಣ ತೀರ್ಥ, ರಾಮದಾಸ, ಪುರಂದರ ದಾಸ, ಕನಕದಾಸರು ಮುಂತಾದವರ ಕೊಡುಗೆಯನ್ನು ಸಾಂಸ್ಕೃತಿಕ ಕ್ಷೇತ್ರ ಮರೆಯುವುದು ಸಾಧ್ಯವಿಲ್ಲ. ಉತ್ತರ ಭಾರತದಲ್ಲಿ ತುಳಸೀದಾಸರು, ಮೀರಾಭಾಯಿ, ಸಂತ ತುಕಾರಾಮರ ಮತ್ತು ಗೀತ ಗೋವಿಂದಂ ಅನ್ನು ಬರೆದ ಜಯದೇವ ಕವಿಯ ಹೆಸರು ಪ್ರಧಾನವಾದುದು.

ಶತಮಾನಗಳಿಂದಲೂ ಕಲಾವಿದರು ಈ ವಾಗ್ಗೇಯಕಾರರ ಸಾಹಿತ್ಯದಿಂದ ಪ್ರೇರಣೆಯನ್ನು ಪಡೆದು ತಮ್ಮ ಕಲಾಪ್ರೌಢಿಮೆಯನ್ನು ವಿಸ್ತರಿಸಿಕೊಂಡಿದ್ದಾರೆ. ಹೀಗೆ ನೃತ್ಯ, ಅಭಿನಯ ಮತ್ತು ಸಂಗೀತದ ದೆಸೆಯಿಂದಲಾಗಿ ಸಾಹಿತ್ಯವು ಹೆಚ್ಚು ಜನರಿಗೆ ತಲುಪುವುದು ಸಾಧ್ಯವಾಗಿದೆ. ಇಂದು ಈ ಕ್ಷೇತ್ರದಲ್ಲಿ ಅನೇಕ ರೀತಿಯ ಅಧ್ಯಯನ ಸಂಶೋಧನೆಗಳನ್ನು ಕಲಾವಿದರು, ಕಲಾಪ್ರಿಯರು ನಡೆಸುತ್ತ ಬಂದಿದ್ದಾರೆ. ನಾನೂ ಹೈದರಾಬಾದ್‌ನ ತೆಲುಗು ವಿಶ್ವವಿದ್ಯಾಲಯದಲ್ಲಿ ನೃತ್ಯದಲ್ಲಿ ಪದವಿ ಓದುತ್ತಿರುವಾಗ ಈ ಸಾಹಿತ್ಯ ಲೋಕದತ್ತ ಆಕರ್ಷಿತಳಾದೆ. ವಾಗ್ಗೇಯಕಾರರ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಉದ್ದೇಶದಿಂದ ಓದುತ್ತಿರುವಾಗ ವಾಗ್ಗೇಯಕಾರರಾದ ಕ್ಷೇತ್ರಯ್ಯ ಅವರ ಪದ್ಯಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದೆ. ಕ್ಷೇತ್ರಯ್ಯ ಕವಿಯ ಪದ್ಯಗಳಲ್ಲಿ ಅಭಿನಯದ ಅವಕಾಶಗಳು ವಿಸ್ತಾರವಾಗಿದ್ದುದನ್ನು ಗಮನಿಸಿ, ನನ್ನ ಸ್ನಾತಕೋತ್ತರ ಅಧ್ಯಯನದ ಸಂದರ್ಭದಲ್ಲಿ 'ಕ್ಷೇತ್ರಯ್ಯ ಕವಿಯ ಪದ್ಯಗಳಲ್ಲಿ ನಾಯಕಿಯರ ಪ್ರಸ್ತುತಿ'ಯನ್ನೇ ಕೇಂದ್ರವಾಗಿರಿಸಿ ಪುಸ್ತಕ ಬರೆದೆ. ಸಂಶೋಧನೆಗೆ